RNU AIR DHARWAD

OCTOBER 10, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

**ಪ್ರಧಾನಮಂತ್ರಿ ಕೃಷಿ ಸಿಚಾಯಿ ಯೋಜನೆಯಡಿ,** 90 ಕೋಟಿ ರೂಪಾಯಿ ವೆಚ್ಚದಲ್ಲಿ, 15 ಯೋಜನೆಗಳನ್ನು, ರಾಜ್ಯದ 15 ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲು, ರಾಜ್ಯ ಸಚಿವ ಸಂಪುಟ, ಅನುಮೋದಿಸಿದೆ. ಬೆಂಗಳೂರಿನಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ, ಸಚಿವ ಸಂಪುಟ ಸಭೆ ನಡೆಯಿತು. ರಾಜ್ಯ ನಾಗರಿಕ ಸೇವೆ ನೇಮಕಾತಿಗಳಲ್ಲಿ, ಎಲ್ಲ ವರ್ಗದ ಅಭ್ಯರ್ಥಿಗಳಿಗೆ, ಗರಿಷ್ಠ 3 ವರ್ಷಗಳ ವಯೋಮಿತಿ ಸಡಿಲಿಸಲು, ಸಚಿವ ಸಂಪುಟ ಒಪ್ಪಿದ್ದಾಗಿ, ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ.ಪಾಟೀಲ, ಸಭೆಯ ಬಳಿಕ ತಿಳಿಸಿದರು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, 405 ಕೋಟಿ 55 ಲಕ್ಷ ರೂಪಾಯಿ ವೆಚ್ಚದಲ್ಲಿ, 11 ಶ್ರಮಿಕ ವಸತಿ ಶಾಲೆಗಳನ್ನು ನಿರ್ಮಿಸಲಿದೆ.ಬೀದರ್ ಜಿಲ್ಲೆ, ಔರಾದ್ ಬಿ. ಪಟ್ಟಣ ಪಂಚಾಯಿತಿಯನ್ನು, ಪುರಸಭೆಯಾಗಿ ಮೇಲ್ದರ್ಜೆಗೇರಿಸಲು, ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ ಎಂದು, ಹೇಳಿದರು.

<><><>

**ಬೆಂಗಳೂರು ನಗರ ಸೇರಿದಂತೆ ರಾಜ್ಯದ ಇನ್ನಿತರ ಪ್ರದೇಶಗಳಲ್ಲಿ** ಸಾವಿರದ ಇನ್ನೂರು ಚದರಡಿ ವಿಸ್ತೀರ್ಣದಲ್ಲಿ ಮನೆ ನಿರ್ಮಿಸಿದವರಿಗೆ, ನಿರಾಕ್ಷೇಪಣಾ ಪ್ರಮಾಣಪತ್ರ–ಎನ್.ಒ.ಸಿ ಇಲ್ಲದೆಯೂ ವಿದ್ಯುತ್ ಹಾಗೂ ನೀರಿನ ಸಂಪರ್ಕ ನೀಡುವಂತೆ, ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಕೋಲಾರದಲ್ಲಿ ತಿಳಿಸಿದ್ದಾರೆ.

<><><>

**ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ,** ಏಕಾಏಕಿ ಅಪಾರ ಪ್ರಮಾಣದಲ್ಲಿ ಮಳೆ ಸುರಿದ ಹಿನ್ನೆಲೆ, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ, ಎಂಟು ಮನೆಗಳಿಗೆ ಹಾನಿಯಾಗಿದೆ. ಜಿಲ್ಲಾ ಪಂಚಾಯಿತಿ ಸಿ.ಇ.ಒ. ಭುವನೇಶ ಪಾಟೀಲ, ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಮಳೆ ಹಾನಿ ಪರಿಶೀಲಿಸಿದರು. ಅಣ್ಣಿಗೇರಿ ತಾಲೂಕಿನ ಸೈದಾಪುರ ಹಾಗೂ ಹೊಸಳ್ಳಿ ಸಂಪರ್ಕಿಸುವ ಹೊರೆಹಳ್ಳದ ಕಿರು ಸೇತುವೆ ಕೊಚ್ಚಿ ಹೋಗಿದೆ. ಅಣ್ಣಿಗೇರಿ ಕುರಿಗಾಹಿ, ಮಲ್ಲಪ್ಪ ಬೆಳ್ಳಿಕೊಪ್ಪ ಅವರಿಗೆ ಸೇರಿದ ಏಳು ಕುರಿಗಳು ಸಿಡಿಲು ಬಡಿದು ಸಾವನ್ನಪ್ಪಿವೆ ಎಂದು, ಪ್ರಾಥಮಿಕ ವರದಿ ತಿಳಿಸಿದೆ.

<><><>

**ಗದಗ ಜಿಲ್ಲೆಯಲ್ಲಿ,** ಶಿಥಿಲಗೊಂಡ ಅಂಗನವಾಡಿ ಕಟ್ಟಡಗಳನ್ನು, ಆದ್ಯತೆ ಮೇಲೆ, ಪುನರ್ ನಿರ್ಮಿಸುವಂತೆ, ಗದಗ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ, ರಮಣದೀಪ ಚೌಧರಿ, ಜಿಲ್ಲಾಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಸಭೆ ನಡೆಸಿದ ಅವರು, ನಿವೇಶನ ಲಭ್ಯವಿರುವಲ್ಲಿ, ನೂತನ ಅಂಗನವಾಡಿ ಕಟ್ಟಡ ನಿರ್ಮಿಸುವಂತೆ ಸೂಚಿಸಿದರು.

<><><>

**ಶಾಲೆ ಬಿಟ್ಟ ಮಕ್ಕಳ,** ಸಮಗ್ರ ಮಾಹಿತಿಯನ್ನು ಕ್ರೋಢೀಕರಿಸಿ, ಮುಂಬರುವ 15 ದಿನಗಳಲ್ಲಿ ವರದಿ ಸಲ್ಲಿಸುವಂತೆ, ರಾಜ್ಯ ಬಾಲ ವಿಕಾಸ ಅಕಾದೆಮಿ ಅಧ್ಯಕ್ಷ, ಸಂಗಮೇಶ ಬಬಲೇಶ್ವರ, ವಿಜಯಪುರ ಜಿಲ್ಲಾಡಳಿತಕ್ಕೆ, ಸೂಚಿಸಿದ್ದಾರೆ. ವಿಜಯಪುರದಲ್ಲಿ, ಸಭೆ ನಡೆಸಿದ ಅವರು, ಬಾಲ್ಯ ವಿವಾಹ, ಬಾಲ ಗರ್ಭಿಣಿ, ಬಾಲ ಹಾಗೂ ಕಿಶೋರ ಕಾರ್ಮಿಕದಂತಹ, ಅನಿಷ್ಠ ಪದ್ಧತಿಗಳನ್ನು ತೊಡೆದು ಹಾಕಲು, ಶಾಲಾ ಮುಖ್ಯೋಪಾಧ್ಯಾಯರು, ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ, ಪುನಃ ಶಾಲೆಗೆ ನಿಯಮಿತವಾಗಿ ಬರುವಂತೆ, ಕ್ರಮ ವಹಿಸಬೇಕು, ಎಂದರು.

<><><>

**ಹುಬ್ಬಳ್ಳಿಯ ಇನ್ನರ್ ವೀಲ್ ಕ್ಲಬ್,** ನಾಳೆ ಮತ್ತು ನಾಡಿದ್ದು, ಗೋಕುಲ ರಸ್ತೆಯ ಹೆಬಸೂರು ಭವನದಲ್ಲಿ, ದೀಪಾವಳಿ ಪ್ರಯುಕ್ತ ಸ್ಥಳೀಯ ಗೃಹೋದ್ಯಮಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, 'ವೋಕಲ್ ಫಾರ್ ಲೋಕಲ್', 'ಬೈ ಲೋಕಲ್, ಎಂಪವರ್ ಲೋಕಲ್', ಧ್ಯೇಯದೊಂದಿಗೆ, ಕರಕುಶಲ ವಸ್ತುಗಳು, ಕೈಮಗ್ಗ ವಸ್ತ್ರಗಳು, ಖಾದ್ಯ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳ –'ಉಡಾನ್' ಆಯೋಜಿಸಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಇನ್ನರ್ ವೀಲ್ ಕ್ಲಬ್, ಮಾಜಿ ಅಧ್ಯಕ್ಷರಾದ ಪ್ರೇಮಲತಾ ಪಾಟೀಲ್....

<><><>

**ಒಡಿಶಾ ರಾಜಧಾನಿ,** ಭುವನೇಶ್ವರದಲ್ಲಿ ಇಂದಿನಿಂದ 14ರ ವರೆಗೆ 40ನೇ ರಾಷ್ಟ್ರೀಯ ಕಿರಿಯರ, ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಆಯೋಜಿತವಾಗಿದೆ. ಶಿವಮೊಗ್ಗ ಜಿಲ್ಲೆಯ, ವಸತಿ ಶಾಲೆ ಹಾಗೂ ಕ್ರೀಡಾ ಶಾಲೆಯ, ಸಂಜಯ ಹಂಚಿನಮನೆ, ಕೆ.ಜೆ. ಶರತ್, ಎಲ್.ಜೆ. ಸಚಿನ್, ಕೆ.ಜೆ. ಸಿರಿ, ಆರ್ಯನ್ ಮತ್ತು ಎಂ.ಆರ್ ಅನ್ವಿತ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಲಿದ್ದಾರೆ.

<><><>

**ಕರ್ನಾಟಕ ಸಾಹಿತ್ಯ ಅಕಾದೆಮಿ** ಕೊಡಮಾಡುವ ಗೌರವ ಪ್ರಶಸ್ತಿ ಹಾಗೂ ಸಾಹಿತ್ಯ ಶ್ರೀ ಪ್ರಶಸ್ತಿಗಳನ್ನು ಘೋಷಿಸಲಾಗಿದೆ. 2024 ನೇ ಸಾಲಿನ ಗೌರವ ಪ್ರಶಸ್ತಿಗೆ ಕಲಬುರಗಿಯ ಡಾಕ್ಟರ ಡಿ.ಬಿ ನಾಯಕ್, ಚಾಮರಾಜನಗರದ ಎಂ. ಬಸವಣ್ಣ, ಬೆಂಗಳೂರಿನ ಶೂದ್ರ ಶ್ರೀನಿವಾಸ್, ಪ್ರತಿಭಾ ನಂದಕುಮಾರ್ ಹಾಗೂ ಮುಂಬಯಿಯ ವಿಶ್ವನಾಥ ಕಾರ್ನಾಡ್ ಭಾಜನರಾಗಿದ್ದಾರೆ. ಸಾಹಿತ್ಯಶ್ರೀ ಪ್ರಶಸ್ತಿಗೆ ತುಮಕೂರು ಜಿಲ್ಲೆಯ ಬಿ.ಯು ಸುಮಾ ಸೇರಿದಂತೆ ಒಟ್ಟು 10 ಜನರು ಆಯ್ಕೆಯಾಗಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಯುವಜನತೆಯಲ್ಲಿ, ವೈಜ್ಞಾನಿಕ ಮನೋಭಾವ ಹಾಗೂ ವಿಜ್ಞಾನ ವಿಷಯದ ಬಗ್ಗೆ ಜಿಜ್ಞಾಸೆ ಬೆಳೆಸಲು, ಆತ್ಮನಿರ್ಭರ ಭಾರತದಡಿ, ಜ್ಞಾನ, ವಿಜ್ಞಾನ, ನಾವಿನ್ಯತೆ ಆಧಾರಿತ, ಸ್ವಾವಲಂಬಿ ಭಾರತ ನಿರ್ಮಾಣಕ್ಕೆ, ಭದ್ರ ಅಡಿಪಾಯ ಹಾಕಿದ್ದಾರೆ ಎಂದು, ರಾಜ್ಯಪಾಲ ಥಾವರಚಂದ ಗೆಹಲೋಟ್, ಹೇಳಿದ್ದಾರೆ. ದೊಡ್ಡಬಳ್ಳಾಪುರದ, ಬೆಸೆಂಟ್ ಪಾರ್ಕ್‌ನ, ಸ್ಕೌಟ್ಸ್ ಕ್ಯಾಂಪ್‌ನಲ್ಲಿ ಸಮಾರೋಪಗೊಂಡ, 9 ದಿನಗಳ 'ನಾನೂ ವಿಜ್ಞಾನಿ' ಟೆಲಿಸ್ಕೋಪ್ ರಚನಾ ಕಮ್ಮಟದಲ್ಲಿ, ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ, ಅವರು ಮಾತನಾಡಿದರು.

<><><>